

ಚಾಲೂ ಮಾಡಲು ಹೋದವರು ಯಾವುದೋ ಸ್ವಿಚ್ ಒತ್ತಿದಾಗ ಈ ಭಾನಗಡಿ ಸಂಭವಿಸಿದೆ. ಆವಿರೂಪದಲ್ಲಿ, ಒತ್ತಡದ ಸ್ಥಿತಿಯಲ್ಲಿದ್ದ ಸ್ಟೈರೀನ್ ಅನಿಲದ ಪೀಪಾಯಿಯ ಬಿರಡೆ ಕಿತ್ತು ಬಂದು ವಿಷಾನಿಲ ಎಲ್ಲಡೆ ಪಸರಿಸಿದೆ.

## ಮಾಹಿತಿಗಳ ಮಿಂಚಿನ ವಿನಿಮಯ

ನಾವಿರುವ ಈಗಿನ ಮಾಹಿತಿಯುಗಕ್ಕೆ ಸದ್ಯಕ್ಕೆ ಜೈ ಎನ್ನೋಣ. ಏಕೆಂದರೆ ಅನಿಲ ಸೋರಿಕೆಯಾದ ಒಂದರ್ಧ ಗಂಟೆಯಲ್ಲೇ ಸಾವಿರಾರು ಸಹಾಯ ಹಸ್ತಗಳು ನೆರವಿಗೆ ಬಂದಿವೆ. ಪೊಲೀಸರು, ಅಧಿಕಾರಿಗಳು, ಸಾರಿಗೆ ಸಿಬ್ಬಂದಿ, ವೈದ್ಯರು, ಸ್ವಯಂಸೇವಕರು ಎಲ್ಲರೂ ತುರ್ತಾಗಿ ಅತ್ತ ಧಾವಿಸಿದ್ದಾರೆ. ಮೂರೇ ತಾಸುಗಳಲ್ಲಿ ಆರು ಬಡಾವಣೆಗಳ 1200 ಕುಟುಂಬಗಳನ್ನು ದೂರ ಸುರಕ್ಷಿತ ಪ್ರದೇಶಕ್ಕೆ ಸಾಗಿಸಿದ್ದಾರೆ. ಹೊರ ಸೂಸಿದ ಅನಿಲ ಯಾವುದು, ಅದರ ಸ್ವರೂಪ ಎಂಥದ್ದು, ಅದನ್ನು ನಿಸ್ತೇಜಗೊಳಿಸಲು ಕೈಗೊಳ್ಳಬೇಕಾದ ಕ್ರಮ ಏನು ಎಂಬ ಮಾಹಿತಿಯನ್ನು ಜಾಲಾಡಿ ಜಿಲ್ಲಾಧಿಕಾರಿಯಿಂದ ಹಿಡಿದು ದಿಲ್ಲಿಯ ಏಮ್ಸ್‌ನ ವೈದ್ಯಾಧಿಕಾರಿಯೂ ಚಿಕಿತ್ಸಾ ಕ್ರಮದ ಬಗ್ಗೆ ಹೇಳಿಕೆ ನೀಡುವಷ್ಟರಮಟ್ಟಿಗೆ ಮಿಂಚಿನಂತೆ ಮಾಹಿತಿ ಎಲ್ಲೆಡೆ ಹಬ್ಬಿದೆ. ವಿಷಾನಿಲದ ಪ್ರಭಾವಕ್ಕೆ ತುತ್ತಾದ ಹಳ್ಳಿಗಳು ಯಾವುಯಾವುದೆಂಬುದರ ನಕ್ಷೆಯ ಚಿತ್ರಣಗಳು ಬೆಂಗಳೂರಿನಲ್ಲಿದ್ದವರ ಮೊಬೈಲ್‌ಗಳಿಗೂ ಬಂದಿವೆ. ಪ್ರಧಾನಮಂತ್ರಿಯವರು ತುರ್ತು ಸಭೆ ಕರೆದು, ಪುಣೆಯಲ್ಲಿನ ರಾಷ್ಟ್ರೀಯ ದುರಂತ ನಿರ್ವಹಣಾ ಪಡೆಯೂ ಸಕಲ ಸಿದ್ಧತೆಯೊಂದಿಗೆ ಅಲ್ಲಿಗೆ ಧಾವಿಸುವಂತೆ ನಿರ್ದೇಶನ ನೀಡಿದ್ದಾರೆ. ಅಲ್ಲಿಂದ ಬಂದ ಯೋಧರೂ ಕೆಮಿಕಲ್ ವಿಷ, ಜೈವಿಕ ವಿಷ, ವಿಕಿರಣತಜ್ಞರ ತಂಡದ ಸಮೇತ ಬಂದು 400ಕ್ಕೂ ಹೆಚ್ಚು ಸಂತ್ರಸ್ತರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ವಾತಾವರಣದಲ್ಲಿನ ವಿಷಾನಿಲದ ಉಗ್ರತೆಯನ್ನು ಶಮನ ಮಾಡಲು ಸುತ್ತೆಲ್ಲ ಪಿಟಿಬಿಸಿ ಹೆಸರಿನ ಕೆಮಿಕಲ್ ದ್ರವ ಬೇಕೆಂಬುದು ಗೊತ್ತಾಗಿ, ಅದು ಎಲ್ಲಿ ಸಿಗುತ್ತದೆಂದು ಕೇಂದ್ರ ಗೃಹ ಸಚಿವಾಲಯ ಇಡೀ ದೇಶವನ್ನು ಜಾಲಾಡಿದೆ. ಅದು ಗುಜರಾತಿನ ವಾಪಿ ಎಂಬಲ್ಲಿನ ಒಂದು ಕಾರ್ಖಾನೆಯಲ್ಲಿ ಮಾತ್ರ ತಯಾರಾಗುತ್ತಿದೆ ಎಂಬುದು ಗೊತ್ತಾಗಿ ಅಲ್ಲಿಂದ ಅದನ್ನು ತುರ್ತಾಗಿ ದಮನ್ ವಿಮಾನ ನಿಲ್ದಾಣದ ಮೂಲಕ ವಿಶಾಖಪಟ್ಟಣಕ್ಕೆ ಸಾಗಿಸಿ ತಂದು ಸಿಂಪಡಿಸುವ ವ್ಯವಸ್ಥೆ ಮಾಡಲಾಗಿದೆ.

ಅವೆಲ್ಲ ಸರಿ, ಆದರೆ ಈ ಅನಿಲದ ಸೇವನೆಯ ಪರಿಣಾಮ ಏನು? ಬದುಕುಳಿದವರಲ್ಲಿ ಅದರ ಪರಿಣಾಮ ಏನು? ಅದಕ್ಕೆ ಉತ್ತರ ಹುಡುಕಲೆಂದು ಜಗತ್ತಿನ ಎಲ್ಲ ಪರಿಣತ ಕೆಮಿಕಲ್ ಜಾಲತಾಣಗಳನ್ನು ಜಾಲಾಡಿದ್ದೂ ಆಗಿದೆ. ಅಮೆರಿಕದ ಅಟ್ಲಾಂಟಾ ನಗರದಲ್ಲಿರುವ